# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.763-2013** **ಡಿ . ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ.ಜಿ.ಗಂಗಾಧರ್<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 22-07-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಜೇ.ಎಸ್ ವಕೀಲರಿಂದಃ**

2. ನಮ್ಮದು ಎಂದು ಹೇಳುವ ಸರ್ವೆ ನಂ.95/ಪಿ7 ರ ಜಮೀನನ್ನು ನಾವು ಅಳತೆ ಮಾಡಿಸಿರುವುದಿಲ್ಲ. ನನ್ನದು ಎಂದು ಹೇಳುವ ಸರ್ವೆ ನಂ.95/ಪಿ7 ರ ಜಮೀನಿನ ಚೆಕ್ಕುಬಂದಿಯನ್ನು ತೋರಿಸಲು ನಾನು ನ್ಯಾಯಾಲಯಕ್ಕೆ ಉತಾರ್ ಅನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳುವಂತೆ ನಾನು ನ್ಯಾಯಾಲಯಕ್ಕೆ ಉತಾರ್ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ರವರ ಜಮೀನಿನ ದಕ್ಷಿಣಕ್ಕೆ ನನಗೆ ಸೇರಿದ ಸರ್ವೆ ನಂ.95/ಪಿ7 ರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಾನು ವಿನಾಕಾರಣ ಅವರ ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ವಾದಿಯವರು ನನ್ನ ವಿರುದ್ಧ ಈ ದಾವಾವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗಾಗಲಿ ಅವರಿಗೆ ಸೇರಿದ ಸರ್ವೆ ನಂ.199 ರ ಸ್ವತ್ತಿಗಾಗಲಿ ನಾನು ಯಾವುದೇ ತೊಂದರೆ ನೀಡಿರುವುದಿಲ್ಲ. ದಾವಾ ಸ್ವತ್ತು ಮತ್ತು ನನ್ನ ಸ್ವತ್ತನ್ನು ಅಳತೆ ಮಾಡಿಸಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಲು ನನ್ನ ಅಭ್ಯಂತರ ಇರುವುದಿಲ್ಲ.

3. ನನ್ನ ಲಿಖಿತ ತಕರಾರಿನಲ್ಲಿ ನಾನು ತೊಂದರೆ ನೀಡಿದದಿದ್ದರು ವಾದಿಗಳು ವಿನಾಕಾರಣ ನನಗೆ ತೊಂದರೆ ನೀಡಲು ಈ ದಾವಾವನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದ್ದು, ಅದರೆ ನಾನು ತೊಂದರೆ ನೀಡಿದ್ದರಿಂದ ವಾದಿಗಳು ನನ್ನ ವಿರುದ್ಧ ಈ ದಾವಾ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಜಮೀನು ಭೂ-ಸುಧಾರಣ ನ್ಯಾಯಾಲಯದ ಆದೇಶದ ಮುಖೇನ ಬಂದಂತಹ ಜಮೀನು ಆಗಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

## (ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**